- ಸೆಪ್ಟೆಂಬರ್ ಸಂಚಿಕೆಯ ಮುಖಪುಟ (ಸತ್ಯ ರಾಚಪ್ಪಾಜಿ) ಹಾಗೂ ಒಳಗಿನ ಹೂರಣ ಮನಸೆಳೆದವು. ಪ್ರಬಂಧ 'ಗಾರ್ದಭ ಲೀಲಾವಿಲಾಸ'(ರಹಮತ್ ತರೀಕೆರೆ)ದಲ್ಲಿನ ಕತ್ತೆ ಪುರಾಣ ನಮ್ಮನ್ನು ಮುದಗೊಳಿಸುವಂತಿದೆ. ಎಚ್.ಎಸ್. ಮುಕ್ತಾಯಕ್ಕ, ಸವಿತಾ ನಾಗಭೂಷಣ, ಸ್ಮಿತಾ ಅಮೃತರಾಜ್, ನಂದಿನಿ ಹೆದ್ದುರ್ಗ ಅವರ ಕವಿತೆಗಳು ಇಷ್ಟವಾದವು.

**ಬಿ.ಆರ್. ಅಣ್ಣಾಸಾಗರ, ಸೇಡಂ**

- 'ಗಾರ್ದಭ ಲೀಲಾವಿಲಾಸ' ಪ್ರಬಂಧ ಓದಿ ಮನಸು ಹಗುರವಾಯಿತಷ್ಟೆ ಅಲ್ಲ, ಕತ್ತೆಗಳ ಕುರಿತು ಎಷ್ಟೊಂದು ವಿಷಯ ತಿಳಿಯಿತು. ನಿಜಕ್ಕೂ ಲವಲವಿಕೆಯ ಲವ್ಲಿಯಾದ ಬರಹ!


**ಅನು, ಬೆಂಗಳೂರು**

- 'ನೂರು ಸ್ವರಗಳ ಲೇಖ ಲೋಕ: ಉಮಾ ರಾವ್' (ಸಂದರ್ಶನ: ಹೇಮಾ ಎಸ್.) ಒಂದು ಸೊಗಸಾದ ಸಂವಾದವಾಗಿದೆ. ಕನ್ನಡದ ಮಹತ್ವದ ಕತೆಗಾರ್ತಿ ಉಮಾ ರಾವ್ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯದ ನಿಕಟ ಪರಿಚಯ ಈ ಮಾತುಕತೆಯಲ್ಲಿ ಆಗುತ್ತದೆ.

**ಕಾವ್ಯಾ ಶಿವಾನಂದ, ಬೆಂಗಳೂರು**

- ಆತ್ಮಸಾಕ್ಷಿಯನ್ನು ಯಾರೂ ಗೆಲ್ಲಲಾರರು ಎನ್ನುವುದನ್ನು 'ಅಪರಾಧಿ' ಕತೆ (ಮಲಯಾಳಂ ಮೂಲ: ಎಂ.ಟಿ. ವಾಸುದೇವನ್ ನಾಯರ್, ಕನ್ನಡಕ್ಕೆ: ಮೋಹನ ಕುಂಟಾರ್) ಸಾಬೀತು ಪಡಿಸಿತು. 'ಕಿಲುಬು ಕಾಂಚಾಣ' ಕತೆ (ಗೋಪಿನಾಥ ರಾವ್) ಸರಾಗವಾಗಿ ಓದಿಸಿಕೊಳ್ಳುತ್ತದೆ.

**ಅನುಪಮಾ ಸುರೇಶ್, ಧಾರವಾಡ**




- 'ಮಂಕುಬೂದಿ' ಕತೆ (ವಸುಮತಿ ಉಡುಪ) ಕುತೂಹಲಕಾರಿಯಾಗಿದೆ. ಓದುತ್ತ ಹೋದಂತೆ ಕತೆ ನಮ್ಮ ಅರಿವನ್ನು ವಿಸ್ತರಿಸುತ್ತ ಹೋಗುತ್ತದೆ.

**ಸೇತುರಾವ್ ಕುಲಕರ್ಣಿ, ಬೆಂಗಳೂರು**

- 'ಅಜ್ಜಿಯ ಆಸೆ' ಕತೆ (ಟಿ.ಎಂ. ಶೇಷಗಿರಿ ತುಮರಿ) ಸುಲಲಿತವಾಗಿ ಓದಿಸಿಕೊಂಡು ಹೋಯಿತು.

**ಸುರೇಶ್ ಕುಲಾಲ್, ನಾವೂರು**

- 'ಧೂಮದೊಂದಿಗೆ ಒಂದು ಯಾನ' ಪ್ರಬಂಧ (ರೇಶ್ಮಾ ಭಟ್) ತನ್ನ ಲವಲವಿಕೆಯ ನಿರೂಪಣೆಯಿಂದ ನಮ್ಮನ್ನು ಖುಷಿಗೊಳಿಸಿತು.

**ಸುಕನ್ಯಾ ಸುರೇಶ್, ಶಿವಮೊಗ್ಗ**

- ಗುರುಪ್ರಸಾದ್ ಕಂಟಲಗೆರೆ ಅವರ 'ಹೆಣಭಾರ' ಕತೆ ವಿಶಿಷ್ಟ ನಿರೂಪಣೆ, ವಸ್ತುವಿನಿಂದ ಗಮನ ಸೆಳೆಯುತ್ತದೆ.

**ಗಿರೀಶ ಸೊಲ್ಲಾಪುರ, ಲಿಂಗಸುಗೂರು**

- 'ಚುಕ್ಕಿ' (ಎಚ್.ಆರ್. ರಮೇಶ), 'ನಿರ್ಧಾರ' (ಉಷಾ ನರಸಿಂಹನ್), 'ಅಗ್ನಿ ಪುರುಷ' (ಮಹಾಬಲಮೂರ್ತಿ ಕೊಡ್ಲೆಕೆರೆ) ಕತೆಗಳು ಓದಿನ ಖುಷಿಯನ್ನು ಹೆಚ್ಚಿಸಿದವು.

**ನಾಗರತ್ನ ಎಚ್., ದಾವಣಗೆರೆ**